ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

¸ÀA¥ÀÆgÀ -161 Volume - 161	ಬೆಂಗಳೂರು, ಬುಧವಾರ, 25, ಫೆಬ್ರವರಿ, 2026(ಫಾಲ್ಗುಣ, 06, ಶಕವರ್ಷ, ೧೯೪7) BENGALURU, WEDNESDAY, 25, FEBRUARY, 2026(PHALGUNA , 06, SHAKAVARSHA, 1947)	¸ÀaPÉ39 Issue 39

--ÁUÀ¶

gÁdå ¸ÀÄvÁðgÀªÀÄÄR¡ DzÉÃ±ÀÀ¸ÀºÁUÀÆ ¸ÀÄvÉÆÃ¯É¬ÄÄAvÁzÀ J¯Á E¯ÁSÉÃUÀÆ ¸ÀªÀÄÄSAc¢üzÀDzÉÃ±ÀÀ¸ÀÄ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಆವೃತ್ತಿ 2.0 (K-GIS 2.0) ತಂತ್ರಾಂಶದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ಮಾಡಲು ರಚಿಸಲಾದ ತಜ್ಞರ ಕಾರ್ಯಪಡೆಯ (Expert Task Force) ಅಧ್ಯಕ್ಷರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಅಧ್ಯಕ್ಷರನ್ನು ಮರು ನೇಮಿಸುವ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: 92 ಇಜಿಎಂ 2025, ದಿನಾಂಕ: 16-10-2025.
2. ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಕಡತ ಸಂಖ್ಯೆ: KSRSAC-ADM/4/2026-KSRSAC-KSRSAC-KA .

****

ಪ್ರಸ್ತಾವನೆ:

ಮೇಲೆ ಕ್ರ.ಸಂ. (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ವತಿಯಿಂದ ಜಾರಿಗೊಳಿಸುತ್ತಿರುವ ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಆವೃತ್ತಿ 2.0 (K-GIS 2.0) ತಂತ್ರಾಂಶದ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿವರವಾದ ವ್ಯಾಖ್ಯಾನ, ವಿನ್ಯಾಸ ಅನುಷ್ಠಾನ, ಇಂಟರ್ ಫೇಸ್ ಮತ್ತು ನೀತಿಯ ಮಾರ್ಗದರ್ಶನ ನೀಡಲು ಹಾಗೂ ಮೇಲ್ವಿಚಾರಣೆ ಮಾಡಲು ಈ ಕೆಳಕಂಡ ತಜ್ಞರ ಕಾರ್ಯಪಡೆಯನ್ನು (Expert Task Force) ರಚಿಸಿ ಆದೇಶಿಸಲಾಗಿದೆ.

ಕ್ರ ಸಂ	ಹೆಸರು	ಹುದ್ದೆ	ಸದಸ್ಯತ್ವದ ಪ್ರಕಾರ
1	ಡಾ. ಮುಕುಂದ್ ಕಡೂರು ಶ್ರೀನಿವಾಸ ರಾವ್	ಮಾಜಿ ಕಾರ್ಯಕ್ರಮ ನಿರ್ದೇಶಕರು; ಇಸ್ರೋ ಸಂಸ್ಥೆ, ಕರ್ನಾಟಕ ಜ್ಞಾನ ಆಯೋಗದ ಮಾಜಿ ಸದಸ್ಯ ಕಾರ್ಯದರ್ಶಿ, ಕರ್ನಾಟಕ-ಜಿಐಎಸ್ ತಾಂತ್ರಿಕ ಸಮಿತಿಯ ಅಧ್ಯಕ್ಷರು,ಯೋಜನಾ ಆಯೋಗದ ಮಾಜಿ ಸಲಹೆಗಾರರು ಮತ್ತು ನವಯುಗ ಸ್ಪೇಷಿಯಲ್ ಟೆಕ್ನಾಲಜೀಸ್ ಮಾಜಿ ಸಿಇಒ	ಅಧ್ಯಕ್ಷರು

2	ಡಾ. ರಾಜ್‌ಕುಮಾರ್ ಖತ್ರಿ, ಭಾ,ಆ,ಸೇ (ನಿವೃತ್ತ)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ನಿವೃತ್ತ), ಕರ್ನಾಟಕ ಸರ್ಕಾರ	ಸದಸ್ಯರು
3	ಶ್ರೀ ಬಿಶ್ವಜಿತ್ ಮಿಶ್ರಾ, ಐ.ಎಫ್.ಎಸ್	APCCF (ಕಾರ್ಯ ಯೋಜನೆ) ಕರ್ನಾಟಕ ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ	ಸದಸ್ಯರು
4	ಡಾ. ಜೆ ವಿ ಥಾಮಸ್	ನಿರ್ದೇಶಕರು, EDPO, ISRO ಪ್ರಧಾನ ಕಚೇರಿ	ಸದಸ್ಯರು
5	ಡಾ. ವಿ ರಾಮಮೂರ್ತಿ	ಪ್ರಾದೇಶಿಕ ಮುಖ್ಯಸ್ಥರು, ICAR- ನ್ಯಾಶನಲ್ ಬ್ಯೂರೋ ಆಫ್ ಸಾಯಿಲ್ ಸರ್ವೇ ಮತ್ತು ಭೂ ಬಳಕೆ ಯೋಜನೆ	ಸದಸ್ಯರು
6	ಪ್ರೊ. ದೇಬ್ರತ ದಾಸ್,	ನಿರ್ದೇಶಕರು, IIIT, ಬೆಂಗಳೂರು.	ಸದಸ್ಯರು
7	ಪ್ರೊ: ಓಂಕಾರ್ ಎನ್.ಎಸ್, ಮುಖ್ಯ ಸಂಶೋಧನಾ ವಿಜ್ಞಾನಿ,	ಏರೋಸ್ಪೇಸ್ ಎಂಜಿನಿಯರಿಂಗ್ ವಿಭಾಗ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು	ಸದಸ್ಯರು
8	ಭಾರತೀಯ ಬಹುರಾಷ್ಟ್ರೀಯ ಐಟಿ ಕಂಪನಿಯ ಪ್ರತಿನಿಧಿ	ಭಾರತೀಯ ಬಹುರಾಷ್ಟ್ರೀಯ ಐಟಿ ಕಂಪನಿಯಲ್ಲಿ ಹಿರಿಯ ವ್ಯವಸ್ಥಾಪಕ ಮಟ್ಟದ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಐಟಿ ಮತ್ತು ಜಿಐಎಸ್ ಅಪ್ಲಿಕೇಶನ್ ಅಭಿವೃದ್ಧಿ ಅನುಭವ ಹೊಂದಿರುವವರು	ಸದಸ್ಯರು
9	ನಿರ್ದೇಶಕರು	ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಮತ್ತು ಮಿಷನ್ ನಿರ್ದೇಶಕರು, ಕೆ-ಜಿಐಎಸ್ ಆವೃತ್ತಿ 2.0	ಸದಸ್ಯ ಕಾರ್ಯದರ್ಶಿಗಳು & ಸಂಚಾಲಕರು

ಮೇಲೆ ಕ್ರ.ಸಂ. (2) ರಲ್ಲಿ ಓದಲಾದ ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರದ ಕಡತದಲ್ಲಿ ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಆವೃತ್ತಿ 2.0 (K-GIS 2.0) ತಂತ್ರಾಂಶದ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ವಿವರವಾದ ವ್ಯಾಖ್ಯಾನ, ವಿನ್ಯಾಸ ಅನುಷ್ಠಾನ, ಇಂಟರ್ ಫೇಸ್ ಮತ್ತು ನೀತಿಯ ಮಾರ್ಗದರ್ಶನ ನೀಡಲು ಹಾಗೂ ಮೇಲ್ವಿಚಾರಣೆ ಮಾಡಲು ರಚಿಸಲಾದ ತಜ್ಞರ ಕಾರ್ಯಪಡೆಯ (Expert Task Force) ಅಧ್ಯಕ್ಷರಾದ ಶ್ರೀ ಮುಕುಂದ್ ಕಡೂರು ಶ್ರೀನಿವಾಸ ರಾವ್, ಇವರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಸಲ್ಲಿಸಿರುವುದಾಗಿ ತಿಳಿಸಲಾಗಿದೆ. ಮುಂದುವರೆದು, ಶ್ರೀ ಮುಕುಂದ್ ಕಡೂರು ಶ್ರೀನಿವಾಸ ರಾವ್ ಇವರ ರಾಜೀನಾಮೆಯಿಂದ ತೆರವಾದ ತಜ್ಞರ ಕಾರ್ಯಪಡೆಯ ಅಧ್ಯಕ್ಷ ಸ್ಥಾನಕ್ಕೆ ಪ್ರಸ್ತುತ ಕಾರ್ಯಪಡೆಯ ಸದಸ್ಯರಾಗಿರುವ ನೇಮಿಸಲಾಗಿರುವ ಶ್ರೀ ಬಿಶ್ವಜಿತ್ ಮಿಶ್ರಾ, ಐ.ಎಫ್.ಎಸ್., ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯ ಯೋಜನೆ) ಕರ್ನಾಟಕ ಅರಣ್ಯ ಇಲಾಖೆ, ಇವರನ್ನು ನೇಮಿಸುವಂತೆ ಕೋರಲಾಗಿದೆ. ಸದರಿ ಕ್ರಮಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ಕಡತದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಆಸುಇ (ಇ-ಆಡಳಿತ) ಇವರು ಅನುಮೋದನೆಯನ್ನು ನೀಡಿರುತ್ತಾರೆ.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ನಿರ್ದೇಶಕರು, ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ ಇವರ ಪ್ರಸ್ತಾವನೆಯನ್ನು ಪರಿಶೀಲಿಸಿದ್ದು, ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಆವೃತ್ತಿ 2.0 (K-GIS 2.0) ತಂತ್ರಾಂಶದ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಲು ಹಾಗೂ ಮೇಲ್ವಿಚಾರಣೆ ಮಾಡಲು ರಚಿಸಲಾದ ತಜ್ಞರ ಕಾರ್ಯಪಡೆಯ (Expert Task Force) ಅಧ್ಯಕ್ಷರಾದ ಶ್ರೀ ಮುಕುಂದ್ ಕಡೂರು ಶ್ರೀನಿವಾಸ ರಾವ್ ಇವರ ರಾಜೀನಾಮೆಯಿಂದ ತೆರವಾದ ತಜ್ಞರ ಕಾರ್ಯಪಡೆಯ ಅಧ್ಯಕ್ಷ ಸ್ಥಾನಕ್ಕೆ ಪ್ರಸ್ತುತ ಕಾರ್ಯಪಡೆಯ ಸದಸ್ಯರಾಗಿರುವ ಶ್ರೀ ಬಿಶ್ವಜಿತ್ ಮಿಶ್ರಾ, ಐ.ಎಫ್.ಎಸ್., ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯ ಯೋಜನೆ) ಕರ್ನಾಟಕ ಅರಣ್ಯ ಇಲಾಖೆ, ಇವರನ್ನು ತಜ್ಞರ ಕಾರ್ಯಪಡೆಯ ಅಧ್ಯಕ್ಷರನ್ನಾಗಿ ನೇಮಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 92 ಇಜಿಎಂ 2025 (ಭಾ-1),
ಬೆಂಗಳೂರು, ದಿನಾಂಕ: 16ನೇ ಫೆಬ್ರವರಿ 2026.

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ ಆವೃತ್ತಿ 2.0 (K-GIS 2.0) ತಂತ್ರಾಂಶದ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗದರ್ಶನ ನೀಡಲು ಹಾಗೂ ಮೇಲ್ವಿಚಾರಣೆ ಮಾಡಲು ರಚಿಸಲಾದ ತಜ್ಞರ ಕಾರ್ಯಪಡೆಯ (Expert Task Force) ಅಧ್ಯಕ್ಷರಾದ ಶ್ರೀ ಮುಕುಂದ್ ಕಡೂರು ಶ್ರೀನಿವಾಸ ರಾವ್ ಇವರ ರಾಜೀನಾಮೆಯಿಂದ ತೆರವಾದ ತಜ್ಞರ ಕಾರ್ಯಪಡೆಯ ಅಧ್ಯಕ್ಷ ಸ್ಥಾನಕ್ಕೆ, ಪ್ರಸ್ತುತ ಕಾರ್ಯಪಡೆಯ ಸದಸ್ಯರಾಗಿರುವ ಶ್ರೀ ಬಿಶ್ವಜಿತ್ ಮಿಶ್ರಾ, ಐ.ಎಫ್.ಎಸ್., ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕಾರ್ಯ ಯೋಜನೆ) ಕರ್ನಾಟಕ ಅರಣ್ಯ ಇಲಾಖೆ, ಇವರನ್ನು ತಜ್ಞರ ಕಾರ್ಯಪಡೆಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

ಉಳಿದಂತೆ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 92 ಇಜಿಎಂ 2025, ದಿನಾಂಕ:16-10-2025ರಲ್ಲಿನ ಅಂಶಗಳು ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಜಯಸುಧಾ. ಡಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ
ಇಲಾಖೆ (ಇ-ಆಡಳಿತ)

PR-62

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH